ಪತ್ತೇದಾರ ರೆವರೆಂಡ್ ನಿಟ್ಟುಸಿರುಬಿಟ್ಟರು.

'ಇದೊಂದು ಬಹಳ ಅಪರೂಪವಾದ 'ಸ್ಪಾಂಟೇನಿಯಸ್ ಹ್ಯೂಮನ್ ಕಂಬಸ್ಚನ್' ಪ್ರಕರಣದ ರೀತಿ ಇದೆ' ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು ರೆವರೆಂಡ್.

ಅರ್ಥವಾಗದವರಂತೆ ಮುಖ ಮಾಡಿ ರೆವರೆಂಡ್‌ರತ್ತ ದಿಟ್ಟಿಸಿ ನೋಡಿದರು ಇನ್‌ಸ್ಪೆಕ್ಟರ್ ವಿಜಯ್.

'ಇನ್ನೂ ಕೆಲವು ಪರೀಕ್ಷೆಗಳನ್ನು ಮಾಡದೇ ಏನೂ ಹೇಳಲಾಗದು. ಇಂಥ ಪ್ರಕರಣಗಳು ಅಪರೂಪವಾದರೂ ಅಸಂಭವವಲ್ಲ. ಯಾವ ಕಾರಣವೂ ಇಲ್ಲದೆ ಆಗಾಗ ಮನುಷ್ಯ ಸುಟ್ಟುಹೋಗುವ ಸಂದರ್ಭಗಳೂ ಉಂಟು. ಇದನ್ನೇ 'ಸ್ಪಾಂಟೇನಿಯಸ್ ಹ್ಯೂಮನ್ ಕಂಬಸ್ಚನ್' ಅಂತ ಕರೆಯುತ್ತಾರೆ' ವಿವರಿಸಿದರು ರೆವರೆಂಡ್.

'ಅಂದರೆ?...'

'ಅಂದರೆ... ಮನುಷ್ಯನ ದೇಹವು ಮರದ ತುಂಡು ಉರಿದಂತೆ ಸುಟ್ಟು ಕರಕಲಾಗುತ್ತೆ. ಮೊದಲು ಚರ್ಮದ ಮೇಲ್ಪದರ ಸುಟ್ಟು, ಪದರ ಪದರಗಳಂತಾಗಿಬಿಡುತ್ತದೆ. ಐದೇ ನಿಮಿಷದಲ್ಲಿ ಕೆಳಪದರದ ಮೇಲೆ ಗುಳ್ಳೆಗಳು ಏಳುತ್ತವೆ. ಆಗ ಆ ಚರ್ಮದ ಕೆಳಗಿರುವ ಕೊಬ್ಬು ಮೇಲಕ್ಕೇರಲು ಪ್ರಾರಂಭಿಸುತ್ತದೆ. ಅದೇ ಕೊಬ್ಬು ಇಂಧನವಾಗಿ ಕೆಲಸ ಮಾಡುತ್ತದೆ. ಅಲ್ಲಿಂದ ದೇಹ ಮೇಣದಬತ್ತಿ ಉರಿದಂತೆ ಕರಗುತ್ತಾ ಬರುತ್ತದೆ' ರೆವರಂಡ್ ವಿವರವಾಗಿಯೇ ವಿಶ್ಲೇಷಿಸಿದರು.

'ಮೇಣದಬತ್ತಿ ತರಹವೇ!'

'ಹೌದು! ಬತ್ತಿ ಸುತ್ತ ಮೇಣ ಇರುತ್ತದೆ. ಬತ್ತಿ ಉರಿಯುತ್ತಾ ಉರಿಯುತ್ತಾ ಮೇಣವನ್ನು ಕರಗಿಸುತ್ತಾ ಬರುತ್ತದೆ. ಆ ಕರಗಿದ ಮೇಣವನ್ನು ಬಳಸಿಕೊಂಡು ಬತ್ತಿ ಉರಿದು ಬೆಳಕು ಕೊಡುತ್ತದೆ. ಹಾಗೇ ದೇಹದಲ್ಲಿನ ಕೊಬ್ಬನ್ನು ಮೇಣವಾಗಿಸಿಕೊಂಡು ಕರಗಿಸುತ್ತಾ, ಬಟ್ಟೆ, ಇನ್ನಿತರ ಸುಡುವಂತ ಪದಾರ್ಥಗಳನ್ನು ಬತ್ತಿಯಂತೆ ಬಳಸಿಕೊಂಡು ಹತ್ತಿ ಉರಿಯುತ್ತದೆ. ಬೆಂಕಿಯ ತೀವ್ರತೆಯನ್ನು ಅನುಸರಿಸಿ ದೊಡ್ಡದಾಗಿ ಹರಡುತ್ತದೆ. ಇದು ಕೆಂಡದಂತೆ ಸುಡುವುದರಿಂದ ಒಟ್ಟು ದೇಹಕ್ಕೆಲ್ಲ ಹರಡದೇ ಇರಬಹುದು. ಅದಕ್ಕೇ ಯುವತಿಯ ಕೈಕಾಲುಗಳು ಹತ್ತಿ ಉರಿದಿಲ್ಲ. ಕಾರಲ್ಲಿ ಯುವತಿ ಕುಳಿತ ಸೀಟ್‌ನ್ನು ಬಿಟ್ಟು ಮತ್ತಿನ್ಯಾವುದೂ ಸುಟ್ಟಿಲ್ಲ. ಇಂಥ ಕೇಸುಗಳಲ್ಲಿ ಒಂದೇ ಒಂದು ಸಣ್ಣ ಬೆಂಕಿ ಕಿಡಿ ಸಾಕು... ದೇಹವು ತನ್ನಷ್ಟಕ್ಕೆ ತಾನೇ ಹೊತ್ತಿ ಉರಿಯಲು. ಕಿಡಿ ಹೇಗೆ, ಎಲ್ಲಿಂದ ಬಂತು? ಎಂಬುದನ್ನು ತನಿಖೆಯಿಂದ ಕಂಡು ಹಿಡಿಯಬೇಕಾಗುತ್ತದೆ' ಎನ್ನುತ್ತಾ ಮೇಲೆದ್ದರು ರೆವರೆಂಡ್.

★★★

'ಬಾಸ್! ಯುವಕನ ಹೆಸರು–ಅಖಿಲೇಶ್, ಯುವತಿ ಹೆಸರು–ಅಖಿಲಾ. ಇಬ್ಬರೂ ಪ್ರೇಮಿಗಳು. ಅಖಿಲಾ ಎಂಜಿನಿಯರಿಂಗ್ ಲಾಸ್ಟ್ ಸೆಮ್‌ನಲ್ಲಿ ಓದುತ್ತಿರುವ ವಿದ್ಯಾರ್ಥಿನಿ. ಅಖಿಲೇಶ್ ಒಂದು ಕಂಪೆನಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಒಂದು ತಿಂಗಳಿಂದ ಕೆಲಸ ಮಾಡುತ್ತಿದ್ದಾನೆ. ಇನ್ನೂ ಎರಡು ಮೂರು ವರ್ಷ ಬಿಟ್ಟು ಮದುವೆ ಮಾಡಿಕೊಳ್ಳುವವರಿದ್ದರು. ಅದು ಹಿರಿಯರಿಗೂ ತಿಳಿದಿತ್ತು. ಹಿರಿಯರೂ ಅದನ್ನು ಒಪ್ಪಿಕೊಂಡಿದ್ದರು' ಎಂದು ಸಂಗ್ರಹಿಸಿದ್ದ ವಿಷಯವನ್ನೆಲ್ಲಾ ರೆವರೆಂಡ್‌ಗೆ ತಿಳಿಸಿದ್ದ, ಸಹಾಯಕ ರಾಜು.

'ಆ ಕಾರು ಯಾರದ್ದು?'

'ಕಾರು ಅಖಿಲಾದ್ದು. ಆ ದಿನ ಅವಳ ಬರ್ತ್‌ಡೇ. ಇಬ್ಬರೂ ಸೆಲೆಬ್ರೇಷನ್‌ಗೆ ಹೋಗುತ್ತಿದ್ದರು.'